# ಕಾನೂನು ಕಿರಣ

# KANOONU KIRANA

**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ**

**ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ**

**LEGAL LITERACY NEWS LETTER OF KARNATAKA STATE LAW UNIVERSITY, HUBBALLI**

ಹುಬ್ಬಳ್ಳಿ ಅಕ್ಟೋಬರ್ 2019 ಪುಟ-4


## ಶೈಕ್ಷಣಿಕ ಸಂಸ್ಥೆಗಳು ಸಂಶೋಧನೆ, ಸೃಜನಶೀಲತೆಗೆ ಆದ್ಯತೆ ನೀಡಿದರೆ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಾಗುತ್ತದೆ: ಶ್ರೀ ಜೆ. ಸಿ. ಮಾಧು ಸ್ವಾಮಿ

ವಕೀಲ ವೃತ್ತಿಯಲ್ಲಿ ನಿರಂತರ ಅಭ್ಯಾಸ ಹಾಗೂ ಸಂಶೋಧನಾ ಮನೋಭಾವ ಇರಬೇಕು. ಕಾನೂನುಗಳು ಸದಾ ಬದಲಾಗುತ್ತಿರುತ್ತವೆ. ವಿದ್ಯಾರ್ಥಿಗಳು ಕಾನೂನಿನ ವಿಷಯಗಳನ್ನು ನಿರಂತರವಾಗಿ ಅಧ್ಯಯನ ಮಾಡಿ, ಕಾನೂನನ್ನು ಹೊಸ ರೀತಿಯಲ್ಲಿ ಅರ್ಥೈಸುವ ಕಾರ್ಯ ಮಾಡಬೇಕು. ಶೈಕ್ಷಣಿಕ ಸಂಸ್ಥೆಗಳು ಸಂಶೋಧನೆ, ಸೃಜನ ಶೀಲತೆಗೆ ಆದ್ಯತೆ ನೀಡಿದರೆ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಾಗುತ್ತದೆ. ಕಾನೂನು ಕಲಿಕೆಯು ಮುಗಿದ ನಂತರ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕೆಲಸ ಅರಸುವ ಬದಲು, ವಕೀಲ ವೃತ್ತಿಯನ್ನು ಕೈಗೆತ್ತಿಕೊಳ್ಳಲು ಕರೆ ನೀಡುತ್ತಾ, ಕಕ್ಷಿದಾರರನ್ನು ಗೌರವದಿಂದ ಕಂಡು ಕಾನೂನಿನ ನೆರವು ನೀಡಲು ಶ್ರೀ ಜೆ. ಸಿ. ಮಾಧು ಸ್ವಾಮಿ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಸನ್ಮಾನ್ಯ ಸಮಕುಲಾಧಿಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರು ದಿನಾಂಕ : 30-09-2019 ರಂದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜಗದೀಶ ಶೆಟ್ಟರರವರು ಮಾತನಾಡುತ್ತ, ವಿಶ್ವವಿದ್ಯಾಲಯವನ್ನು ಮಾದರಿ ವಿಶ್ವವಿದ್ಯಾಲಯವನ್ನಾಗಿ ರೂಪಿಸಬೇಕು ಎಂದರು.



ಶ್ರೀ ಜೆ. ಸಿ. ಮಾಧು ಸ್ವಾಮಿ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಸನ್ಮಾನ್ಯ ಸಮಕುಲಾಧಿಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರು ದಿನಾಂಕ 30-09-2019 ರಂದು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವರು. ಚಿತ್ರದಲ್ಲಿ ಗೌರವಾನ್ವಿತ ಕುಲಪತಿಗಳಾದ ಪ್ರೊ. (ಡಾ.) ಪಿ. ಈಶ್ವರ ಭಟ್ ಮತ್ತು ಇನ್ನಿತರ ಗಣ್ಯರು ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಮಾತನಾಡುತ್ತ, ಕಾನೂನು ಮತ್ತು ಗೃಹ ಇಲಾಖೆಗಳ ಮಧ್ಯ ಸಮನ್ವಯ ಮಾಡುತ್ತಾ ನ್ಯಾಯವ್ಯವಸ್ಥೆಯನ್ನು ಹೆಚ್ಚು ಜನಮುಖಿಯಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ, ಮಾನ್ಯ ಶಾಸಕರು (ವಿಧಾನಸಭೆ), ಹುಬ್ಬಳ್ಳಿ-ಧಾರವಾಡ (ಪಶ್ಚಿಮ) ಇವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ಶಾಸಕರು (ವಿಧಾನ ಪರಿಷತ್), ಶ್ರೀ ಶ್ರೀನಿವಾಸ ಮಾನೆ, ಮಾನ್ಯ ಶಾಸಕರು (ವಿಧಾನ ಪರಿಷತ್), ಶ್ರೀ ಪ್ರದೀಪ ಶೆಟ್ಟರ ಮಾನ್ಯ ಶಾಸಕರು (ವಿಧಾನ ಪರಿಷತ್), ಶ್ರೀ ಅಮೃತ ಅಯ್ಯಪ್ಪ ದೇಸಾಯಿ, ಮಾನ್ಯ ಶಾಸಕರು (ವಿಧಾನಸಭೆ), ಧಾರವಾಡ ಗ್ರಾಮೀಣ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಶ್ರೀ ಎಸ್. ಬಿ. ವಸ್ತ್ರಮಠ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ, ಬೆಂಗಳೂರು, ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಪಿ. ಈಶ್ವರ ಭಟ್ ಗೌರವಾನ್ವಿತ ಕುಲಪತಿಗಳು, ಕರಾಕಾವಿ, ಹುಬ್ಬಳ್ಳಿ, ಶ್ರೀ ಆರ್. ರವಿಶಂಕರ್ ಐ.ಎಫ್.ಎಸ್. ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಡಾ. ಸಿ. ಎಸ್. ಪಾಟೀಲ, ಡೀನ್ ಮತ್ತು ನಿರ್ದೇಶಕರು ಹಾಗೂ ಡಾ. ಜಿ. ಬಿ. ಪಾಟೀಲ, ಕುಲಸಚಿವರು (ಮೌಲ್ಯಮಾಪನ) ಮತ್ತು ಆಹ್ವಾನಿತರು ಉಪಸ್ಥಿತರಿದ್ದರು. ❖

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳು ಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಲು ಬಹಳಷ್ಟು ಸಹಾಯ ವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆ ಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ **'ಕಾನೂನು ಕಿರಣ'** 2019ನೇ ಇಸವಿಯ ಅಕ್ಟೋಬರ್ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

**ನಿಮ್ಮ ವಿಶ್ವಾಸಿ,**
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


## ಸಂಪಾದಕೀಯ ಮಂಡಳಿ

| | |
|---|---|
| **ಪ್ರೊ. (ಡಾ.) ಪಿ. ಈಶ್ವರ ಭಟ್**<br>ಕುಲಪತಿಗಳು<br>ಕರಾಕಾವಿ, ಹುಬ್ಬಳ್ಳಿ. | **ಪೋಷಕರು** |
| **ಪ್ರೊ. ಡಾ. ಸಿ. ಎಸ್. ಪಾಟೀಲ**<br>ಡೀನ್ ಮತ್ತು ನಿರ್ದೇಶಕರು,<br>ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ. | **ಸಲಹೆಗಾರರು** |
| **ಶ್ರೀ ಆರ್. ರವಿಶಂಕರ** ಭಾ.ಅ.ಸೇ.<br>ಕುಲಸಚಿವರು<br>ಕರಾಕಾವಿ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ಜಿ. ಬಿ. ಪಾಟೀಲ**<br>ಕುಲಸಚಿವರು ಮೌಲ್ಯಮಾಪನ (ಪ್ರಭಾರ),<br>ಕರಾಕಾವಿ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ಭೀಮಾಬಾಯಿ ಎಸ್. ಮೂಲಗೆ**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |
| **ಡಾ. ರಂಗಸ್ವಾಮಿ ಡಿ.**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |
| **ಶ್ರೀ. ಸುನಿಲ ಬಾಗಡೆ**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |


# ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಕಾನೂನು

## ಭಾಗ-6 : ಪ್ರಾಚೀನ ವಸ್ತುಗಳ ಮತ್ತು ಕಲಾಭಂಡಾರದ ಅಧಿನಿಯಮ, 1972


–ಪ್ರೊ. (ಡಾ.) ಪಿ. ಈಶ್ವರ ಭಟ್
ಕುಲಪತಿಗಳು
ಕರಾಕಾವಿ, ನವನಗರ, ಹುಬ್ಬಳ್ಳಿ.


**ಸಪ್ಟೆಂಬರ್ ಸಂಚಿಕೆಯ ಮುಂದುವರೆದ ಭಾಗ**

### (ಅ) ರಫ್ತು ವ್ಯವಹಾರ ನಿಯಂತ್ರಣ

ಪ್ರಾಚೀನ ವಸ್ತುಗಳ ಮತ್ತು ಕಲಾಭಂಡಾರದ ಅಧಿನಿಯಮ, 1972 ಜಾರಿಯಾದ ನಂತರ ಕೇಂದ್ರ ಸರಕಾರ ಅಥವಾ ಕೇಂದ್ರ ಸರಕಾರದಿಂದ ಈ ಕುರಿತಾಗಿ ಅಧಿಕಾರ ಪಡೆದ ಯಾವುದೇ ಪ್ರಾಧಿಕಾರ ಅಥವಾ ಕಾರ್ಯ ನಿರ್ವಾಹಕರಲ್ಲದೆ ಬೇರಾವ ವ್ಯಕ್ತಿಯು ಕೂಡಾ ಪಾಚೀನ ವಸ್ತು ಅಥವಾ ಕಲಾಭಂಡಾರದ ರಫ್ತು ಮಾಡುವುದು ಕಾನೂನು ಬಾಹಿರವಾಗಿದೆ (ಕಲಂ 3(1)). ರಫ್ತು ಎಂದರೆ ಭಾರತದ ಹೊರಗಿರುವ ಸ್ಥಳಕ್ಕೆ ಭಾರತದಿಂದ ತೆಗೆದುಕೊಂಡು ಹೋಗುವುದು (ಕಲಂ 2 (1)).

ಯಾವಾಗಲಾದರೂ ಕೇಂದ್ರ ಸರಕಾರ ಅಥವಾ ಅದರ ಪ್ರಾಧಿಕಾರ ಅಥವಾ ಕಾರ್ಯನಿರ್ವಾಹಕರು ಯವುದೇ ಪ್ರಾಚೀನ ವಸ್ತುವನ್ನು ಅಥವಾ ಕಲಾಭಂಡಾರವನ್ನು ರಫ್ತು ಮಾಡಲು ಉದ್ದೇಶಿಸಿದಲ್ಲಿ ಈ ಅಧಿನಿಯಮದ ಕೆಳಗೆ ಮಾಡಿದ ನಿಯಮಗಳ ಪ್ರಕಾರ ವಿಧಿಸಲ್ಪಟ್ಟ ಮಿತಿ ಮತ್ತು ಷರತ್ತುಗಳಿಗೆ ಒಳಪಟ್ಟು ನೀಡಿದ ಪರವಾನಗಿಯ ಅನುಸಾರವಾಗಿ ಮಾತ್ರ ರಫ್ತು ಮಾಡಬಹುದು (ಕಲಂ 3 (21)). ಪ್ರಾಚೀನ ವಸ್ತು ಮತ್ತು ಕಲಾಭಂಡಾರಗಳ ರಫ್ತುಗಳಿಗೆ ಸಂಬಂಧಿಸಿದಂತೆ ಇರುವ ನಿಷೇಧವನ್ನು ಅನುಷ್ಠಾನಗೊಳಿಸಲು ಸುಂಕದ ಅಧಿನಿಯಮ, 1962 ಪ್ರಸಕ್ತ ಅಧಿನಿಯಮಕ್ಕೆ ಚ್ಯುತಿಯಾಗದ ರೀತಿಯಲ್ಲಿ ಅನ್ವಯವಾಗುತ್ತದೆ. ಆದರೆ ರಫ್ತು ಪ್ರಕ್ರಿಯೆಗೀಡಾದ ಪ್ರಾಚೀನ ವಸ್ತು ಮತ್ತು ಕಲಾಭಂಡಾರವನ್ನು ಮುಟ್ಟುಗೋಲು ಹಾಕುವ ವಿಷಯದಲ್ಲಿ ಕೇಂದ್ರಸರಕಾರದ ನಿರ್ದೇಶನವನ್ನು ಪಾಲಿಸತಕ್ಕದ್ದು (ಕಲಂ 4).

### (ಆ) ರಹದಾರಿ ಪದ್ಧತಿಯ ಮೂಲಕ ನಿಯಂತ್ರಣ

ರಹದಾರಿ ಪದ್ಧತಿಯು ಒಂದು ಪರಿಣಾಮಕಾರಿ ನಿಯಂತ್ರಣದ ವ್ಯವಸ್ಥೆಯಾಗಿದೆ. ಪ್ರಾಚೀನ ವಸ್ತುಗಳ ಮತ್ತು ಕಲಾಭಂಡಾರದ ಅಧಿನಿಯಮ, 1972 ಜಾರಿಗೆ ಬಂದು ಆರು ತಿಂಗಳ ಅವಧಿಯು ಕಳೆದ ನಂತರ ಯಾವುದೇ ವ್ಯಕ್ತಿಯು ತಾನಾಗಲೀ ಅಥವಾ ತಾನು ನಿಯೋಜಿಸಿದ ಇತರ ವ್ಯಕ್ತಿಗಳಿಂದಾಗಲಿ ಕಲಂ 8ರ ಪ್ರಕಾರ ನೀಡಿದ ರಹದಾರಿಯ ಮಿತಿ ಮತ್ತು ಷರತ್ತುಗಳಿಗೆ ಒಳಪಟ್ಟಿಲ್ಲದೇ ಯಾವುದೇ ಪ್ರಾಚೀನ ವಸ್ತುವಿನ ಮಾರಾಟ ಮಾಡುವ ಅಥವಾ ಮಾರಾಟಕ್ಕಿಡುವ ವ್ಯವಹಾರ ಮಾಡತಕ್ಕದ್ದಲ್ಲ. ಈ ಸಂದರ್ಭದಲ್ಲಿ 'ಪ್ರಾಚೀನ ವಸ್ತು' ಎಂಬ ಶಬ್ದವು ಪುರಾತನ ಮತ್ತು ಐತಿಹಾಸಿಕ ದಾಖಲೆಗಳನ್ನು (ಸಂಸತ್ತು ಕಾನೂನು ಮೂಲಕ ಘೋಷಿಸಿದ ರಾಷ್ಟ್ರೀಯ ಮಹತ್ವವುಳ್ಳವುಗಳನ್ನು ಬಿಟ್ಟು) ಒಳಗೊಳ್ಳುವುದಿಲ್ಲ.

ಕಲಂ 8ರ ಪ್ರಕಾರ ರಹದಾರಿಯನ್ನು ಪಡೆಯಲು ಪ್ರಾಚೀನ ವಸ್ತುಗಳ ಮಾರಾಟ ಅಥವಾ ಮಾರಾಟಕ್ಕಿಡುವ ವ್ಯವಹಾರವನ್ನು, ತಾನಾಗಲೀ ಅಥವಾ ತನ್ನಿಂದ ನಿಯೋಜಿತವಾದ ವ್ಯಕ್ತಿಯಿಂದಾಗಲೀ, ನಡೆಸಬೇಕೆಂದು ಆಶಿಸುವ ಯಾವನೇ ವ್ಯಕ್ತಿಯು ನಿಯಮಗಳಲ್ಲಿ ಹೇಳಲಾದ ನಿರ್ದಿಷ್ಟರೂಪದ ಅರ್ಜಿ ಪತ್ರದಲ್ಲಿ ನಿಗದಿಪಡಿಸಿದ ಎಲ್ಲಾ ವಿವರಗಳನ್ನು ಹೇಳುತ್ತಾ ರಹದಾರಿಯ ಮಂಜೂರಾತಿಗಾಗಿ ಸಂಬಂಧಿಸಿದ ಕ್ಷೇತ್ರಾಧಿಕಾರವುಳ್ಳ ರಹದಾರಿ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬೇಕು (ಕಲಂ 7). ಕೇಂದ್ರ ಸರಕಾರವು ರಾಜ್ಯಪತ್ರದಲ್ಲಿ ಪ್ರಕಟಿಸುತ್ತಾ ಈ ಅಧಿನಿಯಮದ ಉದ್ದೇಶಕ್ಕಾಗಿರುವ ರಹದಾರಿ ಅಧಿಕಾರಿಗಳನ್ನು ಅವರ ಕ್ಷೇತ್ರ ಮತ್ತು ಅಧಿಕಾರವನ್ನು ನಿರೂಪಿಸುತ್ತಾ ನೇಮಕಾತಿ ಮಾಡಬೇಕು (ಕಲಂ 6). ಅರ್ಜಿ ಸ್ವೀಕರಿಸಿದ ರಹದಾರಿ ಅಧಿಕಾರಿಯು ತನಗೆ ಅಗತ್ಯವೆನಿಸಿದ ವಿಚಾರಣೆಯನ್ನು ಮಾಡಿ ಈ ಕೆಳಗಿನ ವಿಚಾರಗಳನ್ನು ಗಮನಿಸಿಕೊಂಡು ಅರ್ಜಿದಾರನಿಗೆ ರಹದಾರಿಯನ್ನು ಮಂಜೂರು ಮಾಡಬಹುದು: (a) ಅರ್ಜಿದಾರನಿಗೆ ಪ್ರಾಚೀನ ವಸ್ತುಗಳ ವ್ಯಾಪಾರದಲ್ಲಿ ಇರುವ ಅನುಭವ; (b) ಅರ್ಜಿದಾರನು ವ್ಯವಹಾರ ಮಾಡಲು ಉದ್ದೇಶಿಸಿರುವ ಗ್ರಾಮ, ಪಟ್ಟಣ ಅಥವಾ ನಗರ; (c) ಸದರಿ ಗ್ರಾಮ, ಪಟ್ಟಣ ಅಥವಾ ನಗರದಲ್ಲಿ ಈಗಾಗಲೇ ಪ್ರಾಚೀನ ವಸ್ತುಗಳ ಮಾರಾಟದ ಅಥವಾ ಮಾರಾಟಕ್ಕಿಡುವ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳ ಸಂಖ್ಯೆ; (d) ನಿಯಮ ಮೂಲಕ ನಿಗದಿ ಪಡಿಸಿದ ಇತರ ವಿಚಾರಗಳು.

ಪರಂತು, ಒಂದು ವೇಳೆ ಅರ್ಜಿದಾರನು ಪ್ರಾಚೀನ ವಸ್ತುಗಳ (ರಫ್ತು ನಿಯಂತ್ರಣ) ಅಧಿನಿಯಮ, 1947 ರೀತ್ಯಾ ಅಪರಾಧಿಯೆಂದು ಗುರುತಿಸಲ್ಪಟ್ಟಲ್ಲಿ ಅಂತಹ ಅಪರಾಧ ನಿರ್ಣಯದ ದಿನಾಂಕದಿಂದ 10 ವರ್ಷಗಳು ಗತಿಸಿ ಹೋದಲ್ಲದೆ ಆ ಅರ್ಜಿದಾರನಿಗೆ ರಹದಾರಿಯನ್ನು ಕೊಡತಕ್ಕುದಲ್ಲ (ಕಲಂ 8 (1)).

ರಹದಾರಿಯನ್ನು ಬಯಸಿ ಸಲ್ಲಿಸಿದ ಅರ್ಜಿಯನ್ನು ಅರ್ಜಿದಾರನಿಗೆ ರಹದಾರಿ ಅಧಿಕಾರಿಯ ಮುಂದೆ ಅಹವಾಲು ಹೇಳಿಕೊಳ್ಳುವ ಸಮಂಜಸ ಅವಕಾಶವನ್ನು ನೀಡದೆ ನಿರಾಕರಿಸತಕ್ಕುದಲ್ಲ (ಕಲಂ 8 (4)).

ರಹದಾರಿಯನ್ನು ನಿಯಮಗಳಿಗನುಸಾರವಾಗಿ ಸೀಮಿತ ಸಮಯಕ್ಕೆ ಮತ್ತು ನಿರ್ದಿಷ್ಟ ಷರತ್ತುಗಳಿಗೆ ಒಳಪಟ್ಟು ಸೂಕ್ತ ವಿವರಗಳೊಂದಿಗೆ ನೀಡಲಾಗುತ್ತದೆ (ಕಲಂ 8 (3)). ನಿಯಮಾನುಸಾರ ನಿಗದಿಪಡಿಸಿದ ಶುಲ್ಕಕ್ಕೆ ಒಳಪಟ್ಟು ರಹದಾರಿಯನ್ನು ನೀಡಲಾಗುತ್ತದೆ (ಕಲಂ 8 (2)).

ಈ ಮೇಲಿನಂತೆ ನೀಡಲಾದ ರಹದಾರಿಯನ್ನು ರಹದಾರಿದಾರನ ಅರ್ಜಿಯ ಮೇರೆಗೆ ನಿಗದಿತ ಶುಲ್ಕ ಪಾವತಿ ಮಾಡಿದಲ್ಲಿ ನಿಗದಿತ ಅವಧಿಗೆ ರಹದಾರಿ ಅಧಿಕಾರಿಯು ನವೀಕರಿಸಬಹುದು. ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಅರ್ಜಿದಾರನಿಗೆ ಅಹವಾಲು ಹೇಳುವ ಸಮಂಜಸ ಅವಕಾಶಕೊಡದೆ ತಿರಸ್ಕರಿಸತಕ್ಕದ್ದಲ್ಲ.

(ನಾಲ್ಕನೇ ಪುಟಕ್ಕೆ)

# ಪಕ್ಷಾಂತರ ನಿಷೇಧ ಕಾಯ್ದೆ, 1985

ಶಿವಪ್ಪ ಉಮೇಶ ಗೊಡ್ಡೆಮ್ಮಿ
7ನೇ ಸೆಮಿಸ್ಟರ್, ಬಿಬಿ.ಎ., ಎಲ್‌ಎಲ್.ಬಿ.(ಆನರ್ಸ್)
ಕ.ರಾ.ಕಾ.ವಿ. ಕಾನೂನು ಶಾಲೆ, ನವನಗರ, ಹುಬ್ಬಳ್ಳಿ

**ಪೀಠಿಕೆ**

ನಮ್ಮ ಸಂವಿಧಾನದ ಕರಡು ಸಮಿತಿಯು ಸದಸ್ಯರು ನಮ್ಮ ದೇಶದ ಸಂಸ್ಕೃತಿ, ಹಿನ್ನೆಲೆ ಹಾಗೂ ರಾಜಕೀಯ ಪರಿಸ್ಥಿತಿಗೆ ಸಂಸದೀಯ ಪ್ರಜಾಪ್ರಭುತ್ವವು ಅತ್ಯಂತ ಸೂಕ್ತವೆಂದು ಗ್ರಹಿಸಿದರು. ಪ್ರಜಾಪ್ರಭುತ್ವಕ್ಕೆ ಅತ್ಯಂತ ಬಲವಾದ ಮತ್ತು ಸಮರ್ಥನೀಯ ರಾಜಕೀಯ ಪಕ್ಷದ ಅವಶ್ಯವಿರುತ್ತದೆ. ಏಕೆಂದರೆ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ಮತ್ತು ಸಂವಿಧಾನ ವ್ಯವಸ್ಥೆಯ ಕೇಂದ್ರ ಬಿಂದು, ಜೀವನಾಡಿ ಮತ್ತು ಅವಿಭಾಜ್ಯ ಅಂಗವಾಗಿರುತ್ತವೆ. ಪ್ರಜಾಪ್ರಭುತ್ವದಲ್ಲಿ ಸರಕಾರವು ಪ್ರಜೆಗಳಿಂದ ಆಯ್ಕೆಯಾಗಿ, ಪ್ರಜೆಗಳಿಗೋಸ್ಕರ ಮತ್ತು ಪ್ರಜೆಗಳಿಗಾಗಿಯೇ ದುಡಿಯ ಬೇಕಾಗುತ್ತದೆ. ಪ್ರತಿಯೊಂದು ಸರಕಾರವು ಕಾರ್ಯ ನಿರ್ವಹಿಸಲು ರಾಜಕೀಯ ಪಕ್ಷಗಳ ಅಗತ್ಯವಿರುತ್ತದೆ. ರಾಜಕೀಯ ಪಕ್ಷಗಳು ಭಿನ್ನವಾದ ತಾತ್ವಿಕ ವಿಚಾರಗಳನ್ನು ಹೊಂದಿರುತ್ತವೆ. ಪ್ರಜೆಗಳು ತಮಗೆ ಬೇಕಾದ ಪ್ರತಿನಿಧಿ ಯನ್ನು ಆಯಾ ರಾಜಕೀಯ ಪಕ್ಷದ ತಾತ್ವಿಕ ವಿಚಾರಗಳ ಹಿನ್ನಲೆಯಲ್ಲಿ ಆಯ್ಕೆ ಮಾಡುತ್ತಾರೆ. ಪ್ರಜೆಗಳು ತಮ್ಮ ಆಕಾಂಕ್ಷೆಯನ್ನು ಗುಪ್ತಮತ ಪೆಟ್ಟಿಗೆಯಿಂದ ವ್ಯಕ್ತ ಪಡಿಸುತ್ತಾರೆ. ಆ ಮತ ಪೆಟ್ಟಿಗೆಯು ಯಾರು ಸರಕಾರವನ್ನು ಚಲಾಯಿಸಬೇಕೆಂದು ನಿರ್ಧರಿಸುತ್ತದೆ.

ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಕುರುಹು ಹಾಗೂ ಉತ್ಕೃಷ್ಟತೆಯು ಆಯಾ ರಾಜಕೀಯ ಪಕ್ಷಗಳಿಂದ ಚುನಾಯಿತಗೊಂಡಿರುವ ಜನಪ್ರತಿನಿಧಿಗಳ ಗುಣಧರ್ಮದ ಮೇಲೆ ನಿಂತಿರುತ್ತದೆ. ಆದರೆ, ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಯು ತನ್ನ ಅಧಿಕಾರದ ಆಸೆಗಾಗಿ ಅಥವಾ ಇತರೆ ಆಮಿಷಕ್ಕೆ ಬಲಿಯಾಗಿ ಪಕ್ಷಾಂತರ ಮಾಡಿದರೆ ಅಥವಾ ಹಿಂದಕ್ಕೆ ಸರಿದರೆ ಅದು ಅಮಾಯಕ ಮತದಾರರ ತೀರ್ಪಿನ ಹಾಗೂ ಪ್ರಜಾಪ್ರಭುತ್ವ ತತ್ವ ಮತ್ತು ಆಶಯಗಳಿಗೆ ವಿರುದ್ಧವಾಗುತ್ತದೆ.

**ಕಾಯ್ದೆಯ ಹಿನ್ನಲೆ**

ರಾಜಕೀಯ ಪಕ್ಷಾಂತರವು ನಮ್ಮ ಪ್ರಜಾಪ್ರಭುತ್ವಕ್ಕೆ ಮಾರಕ ಹಾಗೂ ಪ್ರಜೆಗಳ ವಿಶ್ವಾಸದ ಉಲ್ಲಂಘನೆ ಮಾಡಿ ದಂತಾಗುತ್ತದೆ. 1967 ರಲ್ಲಿ ಹರ್ಯಾಣದ ಶಾಸಕ ಗಯಾಳ ರಾಮ ಒಂದೇ ದಿನದಲ್ಲಿ ಮೂರು ಬಾರಿ ಪಕ್ಷವನ್ನು ಬದಲಿಸಿದರು. ಆ ನಂತರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾವಿರಾರು ಪಕ್ಷಾಂತರಗಳು ನಡೆದು ಹೋದವು. 1967–72ರ ನಡುವೆ ಶೇಕಡ 50ಕ್ಕಿಂತ ಹೆಚ್ಚಿನ ಶಾಸಕರು ಅಧಿಕಾರದ ಆಸೆಗಾಗಿ ಪಕ್ಷಾಂತರವನ್ನು ಮಾಡಿದರು. 1967 ಮಾರ್ಚ 1968 ಫೆಬ್ರುವರಿ ಮಧ್ಯದಲ್ಲಿ 438 ಪಕ್ಷಾಂತರ ಘಟನೆಗಳು ನಡೆದವು. ಇದರಿಂದಾಗಿ ಸರ್ಕಾರದಲ್ಲಿ ಅಸ್ಥಿರತೆ, ರಾಜಕೀಯ ಭ್ರಷ್ಟಾಚಾರ ಹಾಗೂ ಅಲ್ಪಮತದ ಪಕ್ಷಗಳು ಬಹುಮತ ಪಕ್ಷಗಳಾಗಿ ಪರಿವರ್ತ ನೆಗೊಂಡು ಪ್ರಜಾಪ್ರಭುತ್ವದ ವಿರೋಧಿಯಾಗಿ, ಪ್ರಜೆಗಳು ಕೊಟ್ಟಂತ ಫಲಿತಾಂಶವನ್ನು ಕಡೆಗಣಿಸಿ ರಾಜ್ಯಭಾರ ಮಾಡಿದವು.

1967 ರಲ್ಲಿ ವಾಯ್. ಬಿ. ಚವ್ಹಾಣ ನಿಯೋಗವು ಪಕ್ಷಾಂತರವನ್ನು "ದೇಶದ ಪೀಡೆ"ಯೆಂದು ಹಾಗೂ ಇದು ಪ್ರಜಾಪ್ರಭುತ್ವದ ಅತ್ಯಂತ ಅವಶ್ಯಕವಾದ ಅಂಗವನ್ನು ಸುಲಭವಾಗಿ ನಾಶಪಡಿಸುತ್ತದೆ ಎಂದು ಬಣ್ಣಿಸಿದ್ದಾರೆ. ಇದೇ ರೀತಿ ಪಕ್ಷಾಂತರ ಮುಂದುವರೆದರೆ ಭಾರತದ ಸಂಸದೀಯ ಪ್ರಜಾಪ್ರಭುತ್ವದ ಅಳಿವನ್ನು ಕಾಣ ಬೇಕಾಗುತ್ತದೆ. ಇಂತಹ ಪಕ್ಷಾಂತರವನ್ನು ನಿರ್ಬಂಧಿಸದಿದ್ದರೆ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ತತ್ವ ಮತ್ತು ಆಶಯಗಳನ್ನು ನಿಶ್ಯಕ್ತಗೊಳಿಸಿದಂತಾಗುತ್ತದೆ ಎಂಬ ಕಾರಣದಿಂದ 1985 ರಲ್ಲಿ ಭಾರತ ಸವಿಂಧಾನದ 52ನೇಯ ತಿದ್ದುಪಡಿಯಿಂದ ಪಕ್ಷಾಂತರ ನಿಷೇಧ ಕಾಯ್ದೆಯನ್ನು 10 ನೇ ಅನುಸೂಚಿಯಲ್ಲಿ ಸೇರಿಸಲಾಯಿತು.

ಪಕ್ಷಾಂತರ ನಿಷೇಧ ಕಾಯ್ದೆ, 1985 ಮೂಲ ಉದ್ದೇಶ ಪ್ರಜಾಪ್ರಭುತ್ವದ ವ್ಯವಸ್ಥೆ ಮತ್ತು ಅದಕ್ಕೆ ಆಧಾರವಾಗಿರುವ ತತ್ವಗಳ ಅಡಿಪಾಯವನ್ನು ಗಟ್ಟಿಗೊಳಿಸಿ, ದುಷ್ಟ ರಾಜಕೀಯ ಪಕ್ಷಾಂತರಗಳ ವಿರುದ್ಧ ಹೋರಾಡಲು ಮತ್ತು ದೇಶದ ಹಿತರಕ್ಷಣೆಯನ್ನು ಕಾಪಾಡಲು ಪಕ್ಷಾಂತರ ನಿಷೇಧ ಕಾಯ್ದೆ, 1985 ಯನ್ನು ಜಾರಿಗೆ ತರಲಾಯಿತು.

**ಅನರ್ಹತೆಗೆ ಕಾರಣಗಳು**

ಸಂವಿಧಾನದ 10ನೇ ಅನುಸೂಚಿಯ 2ನೇ ಪ್ಯಾರಾದಲ್ಲಿ ಪಕ್ಷಾಂತರದ ಕಾರಣದ ಮೇಲೆ ಅನರ್ಹತೆಯನ್ನು ಹೇಳುತ್ತದೆ.

(ಪ್ಯಾರಾಗ್ರಾಫ್ 2 (1) (ಎ)) ಪ್ರಕಾರ ಸದನದ ಸದಸ್ಯನು ತನ್ನ ರಾಜಕೀಯ ಪಕ್ಷವನ್ನು ಸ್ವಯಿಚ್ಛೆಯಿಂದ ತ್ಯಜಿಸಿದರೆ;

ರವಿ ಎಸ್. ನಾಯಕ ವಿ. ಭಾರತದ ಒಕ್ಕೂಟ [1994 ಎಸ್.ಸಿ.ಆರ್ (1) 754] ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಸದನದ ಸದಸ್ಯನು ತನ್ನ ರಾಜಕೀಯ ಪಕ್ಷದ ಸದಸ್ಯತ್ವವನ್ನು ಸ್ವಯಿಚ್ಛೆಯಿಂದ ತ್ಯಜಿಸುವುದು ರಾಜೀನಾಮೆಗೆ ಸಮಾನಾರ್ಥಕವಾಗಿರುವುದಿಲ್ಲ. ಒಬ್ಬ ಸದನದ ಸದಸ್ಯನ ನಡತೆಯಿಂದ ಕೂಡ ಅವನು ತನ್ನ ರಾಜಕೀಯ ಪಕ್ಷಕ್ಕೆ ರಾಜೀನಾಮೆಯನ್ನು ನೀಡಿದ್ದಾನೆ ಎಂದು ಪರಿಗಣಿಸಬಹುದು ಎಂದು ಹೇಳಿತು. ಉದಾ ಹರಣೆಗೆ ತನ್ನ ಪಕ್ಷಕ್ಕೆ ವಿರುದ್ಧವಾದ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅಥವಾ ತನ್ನ ಪಕ್ಷದ ವಿರುದ್ಧ ಚುನಾವಣೆಗೆ ನಿಲ್ಲುವುದು.

ಅಥವಾ

ಪ್ಯಾರಾಗ್ರಾಫ್ 2 (1) (ಬಿ) ಯ ಪ್ರಕಾರ ಸದನದ ಸದಸ್ಯನು ತನ್ನ ರಾಜಕೀಯ ಪಕ್ಷ ಅಥವಾ ಪ್ರಾಧಿಕಾರವು ಕೊಟ್ಟಂತಹ ನಿರ್ದೇಶನದ ವಿರುದ್ಧವಾಗಿ, ಅಂಥ ರಾಜಕೀಯ ಪಕ್ಷ ಅಥವಾ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಮತ ಚಲಾಯಿಸಿದರೆ ಅಥವಾ ಮತವನ್ನು ವರ್ಜಿಸಿದರೆ, ಅಂಥ ರಾಜಕೀಯ ಪಕ್ಷವು ಅವನ ಸದಸ್ಯತ್ವವನ್ನು 15 ದಿನಗಳ ಒಳಗಾಗಿ ಮನ್ನಾಮಾಡದಿದ್ದರೆ, ಅಂತಹ ಸದಸ್ಯನು ಅನರ್ಹನಾಗುತ್ತಾನೆ.

ಯಾವುದೇ ನಿರ್ದೇಶನದ ಎಂಬ ಪದದ ಅರ್ಥ ವ್ಯಾಖ್ಯಾನವನ್ನು ಕಿಹೊಟೊ ಹೊಲ್ಲಾನ್ ವಿ. ಝೂಚಿಲ್ಲು [1992 ಎಸ್.ಸಿ.ಆರ್ (1) 686] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ರೀತಿ ವ್ಯಾಖ್ಯಾನಿಸಿದೆ.

**ಯಾವುದೇ ನಿರ್ದೇಶನವು:**

1. ವಿಶ್ವಾಸ ಮತಯಾಚನೆ
2. ಪಕ್ಷದ ಆಂತರಿಕ ನೀತಿ ಅಥವಾ ಮತದಾರರ ಮುಂದೆ ಪಕ್ಷವು ಇಟ್ಟಿರುವ ಪ್ರಸ್ತಾವನೆಗೆ ಸಂಬಧಿಸಿರುವ ಮತಗಳಿಗೆ ಮಾತ್ರ ಪ್ಯಾರಾಗ್ರಾಫ್ 2 (1) (ಬಿ) ಯು ಅನ್ವಯಿಸುತ್ತದೆ.

**ವಿನಾಯಿತಿ**

ಪ್ಯಾರಾಗ್ರಾಫ್ 4ರ ಪ್ರಕಾರ ಒಂದು ವೇಳೆ ಸದನದ ಸದಸ್ಯನ ಮೂಲರಾಜಕೀಯ ಪಕ್ಷವು ಇನ್ನೊಂದು ರಾಜಕೀಯ ಪಕ್ಷದ ಜೊತೆ ವಿಲೀನವಾದರೆ ಹಾಗೂ 3/2 ರಷ್ಟು ಸದನದ ಸದಸ್ಯರು ಆ ವಿಲೀನಕ್ಕೆ ಒಪ್ಪಿಕೊಂಡಿದ್ದರೆ ಅದು ಅನರ್ಹತೆ ವ್ಯಾಖ್ಯೆಗೆ ಬರುವುದಿಲ್ಲ. ಈ ಉಪ ಬಂಧವು ರಾಜಕೀಯ ಪಕ್ಷಗಳ ವಿಲೀನತೆಯನ್ನು ರಕ್ಷಿಸುವುದಲ್ಲದೇ ಸಮರ್ಥಿಸಿಕೊಳ್ಳುತ್ತದೆ.

ಪ್ಯಾರಾಗ್ರಾಫ್ 5 (1)ರ ಪ್ರಕಾರ ಸಭಾಪತಿ ಅಥವಾ ಉಪಸಭಾಪತಿ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅನರ್ಹತೆಯಿಂದ ವಿನಾಯಿತಿ ಹೊಂದಿರುತ್ತಾರೆ. ಏಕೆಂದರೆ ಇವರು ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಅತ್ಯಂತ ಪ್ರಮುಖ ಸ್ಥಾನವನ್ನು ಅಲಂಕರಿಸುತ್ತಾರೆ. ಇದು ಆ ಹುದ್ದೆಯ ಯೋಗ್ಯತೆ ಮತ್ತು ನಿಷ್ಪಕ್ಷಪಾತವಾದ ಪ್ರತೀಕವನ್ನು ಎತ್ತಿಹಿಡಿಯುತ್ತದೆ. ಅವರು ಒಬ್ಬ ಸದಸ್ಯನ ಹಕ್ಕು ಮತ್ತು ಸವಲತ್ತುಗಳ ಹಿತರಕ್ಷಕರಾಗಿರುತ್ತಾರೆ ಅಲ್ಲದೆ ಇವರ ವಿರುದ್ಧ ಸೂಕ್ತವಲ್ಲದ ಅಪನಂಬಿಕೆಗಳನ್ನು ಅಭಿವ್ಯಕ್ತಗೊಳಿ ಸುವುದು ಸಂಸದೀಯ ಪ್ರಜಾಪ್ರಭುತ್ವಕ್ಕೆ ಒಗ್ಗುವುದಿಲ್ಲ. ಆದರೆ ಈ ವಿನಾಯಿತಿಯು, ಒಂದುವೇಳೆ ಅಧ್ಯಕ್ಷನು ಹೊಸಪಕ್ಷವನ್ನು ಕಟ್ಟುವ ಉದ್ದೇಶ ಸ್ಪಷ್ಟವಾದರೆ ಈ ವಿನಾ ಯಿತಿಯು ಅಂತಹ ಅಧ್ಯಕ್ಷರಿಗೆ ಅನ್ವಯಿಸುವುದಿಲ್ಲ. ಅಧ್ಯಕ್ಷರು ಅಧಿಕಾರ ವಹಿಸಿಕೊಂಡಾಗ ಅವರು ಯಾವುದೇ ಪಕ್ಷದತ್ತ ಅಥವಾ ತಾವು ಆಯ್ಕೆಯಾಗಿರುವ ಪಕ್ಷ ದತ್ತವಾಲದಂತೆ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲು ಈ ಉಪಬಂಧವು ಸಹಾಯಮಾಡುತ್ತದೆ.

**ಅಧ್ಯಕ್ಷರ ನ್ಯಾಯವ್ಯಾಪ್ತಿ**

ಪ್ಯಾರಾಗ್ರಾಫ್ 6 (1)ರ ಪ್ರಕಾರ ಪಕ್ಷಾಂತರದ ಕಾರಣದ ಮೇಲಿನ ಪ್ರಶ್ನೆಗಳ ಬಗ್ಗೆ ತಿರ್ಮಾನವನ್ನು ಸದನದ ಅಧ್ಯಕ್ಷನು ಅಂತಿಮವಾಗಿ ತಿರ್ಮಾನಿಸತಕ್ಕದ್ದು ಹಾಗೂ ಅವರ ತಿರ್ಮಾನವೇ ಅಂತಿಮವಾಗಿರತಕ್ಕದ್ದು.

ಸ್ಪೀಕರವರ ಅಧಿಕಾರವು ನ್ಯಾಯಾಂಗದ ಸ್ವರೂಪವಾಗಿದ್ದು ಹಾಗೂ ಸ್ಪೀಕರವರ ತೀರ್ಪನ್ನು ಅನುಚ್ಛೇದ 32, 226 ಮತ್ತು 136 ರ ಕೆಳಗೆ ನ್ಯಾಯಾಂಗದ ಮರು ಪರಿಶೀಲನೆಗೆ ಒಳಪಟ್ಟಿರುತ್ತದೆ. ಸ್ಪೀಕರ ನೈಸರ್ಗಿಕವಾದ ನ್ಯಾಯತತ್ವಗಳನ್ನು ಪಾಲಿಸಬೇಕು ಆದರೆ ಸ್ಪೀಕರವರು ತಮ್ಮ ತೀರ್ಪನ್ನು ಮರು ಪರಿಶೀಲನೆ ಮಾಡಲು ಅವಕಾಶವಿರುವುದಿಲ್ಲ.

ಪ್ಯಾರಾಗ್ರಾಫ್ 6 (2)ರ ಪ್ರಕಾರ ಅನರ್ಹತೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆ ಅಥವಾ ವ್ಯವಹಾರವನ್ನು ಅನುಚ್ಛೇದ 122 ಹಾಗೂ 212 ರ ಅರ್ಥವ್ಯಾಪ್ತಿಯೊಳಗೆ ನಡೆಯುವ ವ್ಯವಹಾರವೆಂದು ಭಾವಿಸಬೇಕು.

255 ನೇ ಕಾನೂನಿನ ಆಯೋಗದ ಶಿಫಾರಸ್ಸಿನ ಪ್ರಕಾರ, ಅನರ್ಹತೆ ವಿಚಾರವನ್ನು ರಾಷ್ಟ್ರಪತಿ ಅಥವಾ ರಾಜ್ಯಪಾಲರು ಚುನಾವಣೆ ಆಯೋಗದ ಸಲಹೆ ಮೇರೆಗೆ ತೀರ್ಪನ್ನು ನೀಡಬೇಕು. ಏಕೆಂದರೆ, ಸದನದ ಅಧ್ಯಕ್ಷರು ರಾಜಕೀಯ ಪಕ್ಷದ ಹಿನ್ನಲೆಯಿಂದ ಬಂದಿರುತ್ತಾರೆ. ಸಾಮಾನ್ಯವಾಗಿ ಅವರು ನಿಷ್ಪಕ್ಷವಾಗಿ ಇರಲು ಸಾಧ್ಯವಿಲ್ಲ. ಅವರು ಸ್ವತಂತ್ರವಾಗಿ ತೀರ್ಪುನೀಡುವಲ್ಲಿ ವಿಫಲರಾಗಿದ್ದರೆಂದು ಅನೇಕ ನಿರ್ದೇಶನಗಳು ಹೇಳುತ್ತವೆ.

(ನಾಲ್ಕನೇ ಪುಟಕ್ಕೆ)

## ಸಾಂಸ್ಕೃತಿಕ ಪರಂಪರೆಯ... (ಎರಡನೇ ಪುಟದಿಂದ)

ರಹದಾರಿಯನ್ನು ಪಡೆದ ಅಥವಾ ನವೀಕರಣ ಗೊಳಿಸಿದ ವ್ಯಕ್ತಿಯು ನಿಯಮಗಳಲ್ಲಿ ಹೇಳಿದಂತಹ ರೀತಿ ಯಲ್ಲಿ ಮತ್ತು ವಿವರಗಳೊಂದಿಗೆ ಸಂಬಂಧಿತ ದಾಖಲೆಗಳನ್ನು, ಭಾವಚಿತ್ರಗಳನ್ನು ಮತ್ತು ದಸ್ತಾವೇಜು ಗಳಲ್ಲಿ ಇಡತಕ್ಕದು. ಅಂತಹ ದಾಖಲೆ, ಭಾವಚಿತ್ರ ಮತ್ತು ದಸ್ತಾವೇಜುಗಳು ರಹದಾರಿ ಅಧಿಕಾರಿಗೆ ಅಥವಾ ಅವರಿಂದ ನಿಯುಕ್ತರಾದ ಸರಕಾರದ ಅಧಿಕೃತ ಅಧಿ ಕಾರಿಗಳಿಗೆ ಎಲ್ಲ ಸಮಂಜಸ ಸಮಯದಲ್ಲೂ ವೀಕ್ಷಣೆಗೆ ಮುಕ್ತವಾಗಿರತಕ್ಕದು (ಕಲಂ 10).

ಒಂದು ವೇಳೆ ರಹದಾರಿ ಅಧಿಕಾರಿಯು, ತನಗೆ ಉಲ್ಲೇಖಿಸಿದ ಹಿನ್ನೆಲೆಯಲ್ಲಿ ಅಥವಾ ಇತರ ಸಂದರ್ಭದಲ್ಲಿ ರಹದಾರಿಯನ್ನು ಕಲಂ 8ರ ಪ್ರಕಾರ ಪಡೆದುಕೊಂಡುದು ಅವಶ್ಯಕ ವಾಸ್ತವ ಸಂಗತಿಗಳ ಮಿಥ್ಯಾ ನಿರೂಪಣೆಯ ಮೂಲಕವಾಗಿತ್ತೆಂದು ಅಥವಾ ರಹದಾರಿದಾರನು ಯಾವುದೇ ಸಮಂಜಸ ಕಾರಣವಿಲ್ಲದೆ ರಹದಾರಿಯಲ್ಲಿ ಒಳಪಡಿಸಲಾದ ಷರತ್ತುಗಳನ್ನು ಪಾಲಿಸಲಿಲ್ಲವೆಂದು ಅಥವಾ ಪ್ರಾಚೀನ ವಸ್ತುಗಳ ಮತ್ತು ಕಲಾಭಂಡಾರ ಅಧಿನಿಯಮದ ಯಾವುದೇ ನಿಬಂಧನೆಗಳನ್ನು ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಉಲ್ಲಂಘಿಸಿದ್ದಾರೆಂದು ಮನವರಿಕೆಯಾದಲ್ಲಿ ರಹ ದಾರಿದಾರನಿಗೆ ಅಹವಾಲು ಹೇಳುವ ಅವಕಾಶವನ್ನಿತ್ತು ಅವನ ರಹದಾರಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತಿನಲ್ಲಿಡಬಹುದು. ಅಂತಹ ಸಂದರ್ಭದಲ್ಲಿ ಅವನ ಅಪರಾಧೀಯ ಹೊಣೆಗಾರಿಕೆಯು ವ್ಯತ್ಯಾಸ ವಾಗದು (ಕಲಂ 11 (1)). ರಹದಾರಿ ಅಧಿಕಾರಿಯು ಕಲಂ 8ರಲ್ಲಿ ನೀಡಲಾದ ರಹದಾರಿಯನ್ನು ಬದಲಾಯಿ ಸುವ ಅಥವಾ ತಿದ್ದುಪಡಿ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ರಹದಾರಿಯು ರದ್ದಾದ ಅಥವಾ ಅಮಾನತುಗೊಳ್ಳಲಾದ ಸಂದರ್ಭದಲ್ಲಿ ಅದರ ಆರು ತಿಂಗಳ ಅವಧಿಯ ಒಳಗೆ ಅಂತಹ ರಹದಾರಿದಾರನು ರದ್ದುಗೊಳಿಸುವ ಪೂರ್ವದಲ್ಲಿ ತನ್ನ ಮಾಲಿಕತ್ವ, ನಿಯಂತ್ರಣ ಅಥವಾ ಸ್ವಾಧೀನದಲ್ಲಿರುವ ಪ್ರಾಚೀನ ವಸ್ತುಗಳನ್ನು ಕಾನೂನುಬದ್ಧ ರಹದಾರಿ ಹೊಂದಿದ ಇತರ ವ್ಯಕ್ತಿಗೆ ರಹದಾರಿ ಅಧಿಕಾರಿಯ ಮುಂದೆ ಘೋಷಿಸುತ್ತಾ ಮಾರಾಟ ಮಾಡಬಹುದು (ಕಲಂ 12).

(ಇ) ಕೇಂದ್ರ ಸರಕಾರದ ಏಕಸ್ವಾಮ್ಯದ ಅಧಿಕಾರ

ಕೇಂದ್ರ ಸರಕಾರವು ಪ್ರಾಚೀನ ವಸ್ತುಗಳನ್ನು ಸಂರಕ್ಷಿಸುವ ಉದ್ದೇಶದಿಂದ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಅವಶ್ಯಕವೆಂಬ ಅಭಿಪ್ರಾಯಪಟ್ಟಲ್ಲಿ ರಾಜ್ಯಪತ್ರದಲ್ಲಿ ಪ್ರಕಟಿಸಿ ಸೂಚಿಸಿದ ದಿನಾಂಕದಿಂದ ಕೇಂದ್ರ ಸರಕಾರವು ಅಥವಾ ಅದರಿಂದ ಅಧಿಕಾರ ಹೊಂದಿದ ಪ್ರಾಧಿಕಾರವು ಅಥವಾ ಕಾರ್ಯನಿರ್ವಾಹಕರು ಮಾತ್ರವೇ ಪ್ರಾಚೀನ ವಸ್ತುಗಳ ಮಾರಾಟ ಅಥವಾ ಮಾರಾಟಕ್ಕಿಡುವ ವ್ಯವಹಾರ ಮಾಡತಕ್ಕುದೆಂದು ಘೋಷಿಸಬಹುದು. ಅಂತಹ ಪ್ರಕಟಣೆಯ ದಿನಾಂಕದ ನಂತರ ಕೇಂದ್ರ ಸರಕಾರ, ಅಥವಾ ಕೇಂದ್ರ ಸರಕಾರದಿಂದ ಅಧಿಕಾರ ಪಡೆದ ಪ್ರಾಧಿಕಾರ ಅಥವಾ ಕಾರ್ಯನಿರ್ವಾಹಕರಲ್ಲದೆ ಬೇರೆ ಯಾವ ವ್ಯಕ್ತಿಯೂ ಸದರಿ ವ್ಯವಹಾರ ಮಾಡತಕ್ಕದಲ್ಲ. ಈಗಾಗಲೇ ರಹದಾರಿ ಪಡೆದುಕೊಂಡ ವ್ಯಕ್ತಿಗಳಿಗೆ ಕೂಡಾ ಸದರಿ ದಿನಾಂಕದ ನಂತರ ಈ ನಿಷೇಧವು ಅನ್ವಯ ವಾಗುತ್ತದೆ. ಅಂತಹ ರಹದಾರಿದಾರರು ನಿಯಮಗಳಲ್ಲಿ ಹೇಳಲಾದ ಅವಧಿಯೊಳಗೆ ರಹದಾರಿ ಅಧಿಕಾರಿಯ ಮುಂದೆ ನಿಷೇಧದ ದಿನಾಂಕದಂದು ತನ್ನ ಮಾಲೀಕತ್ವ, ನಿಯಂತ್ರಣ ಅಥವಾ ಸ್ವಾಧೀನದಲ್ಲಿರುವ ಪ್ರಾಚೀನ ವಸ್ತುಗಳ ಕುರಿತು ಘೋಷಣೆಯನ್ನು ಮಾಡತಕ್ಕುದು (ಕಲಂ 13). **(ಮುಂದುವರೆಯುವುದು)**

## ಪಕ್ಷಾಂತರ ನಿಷೇಧ ಕಾಯ್ದೆ, 1985 (ಮೂರನೇ ಪುಟದಿಂದ)

**ನ್ಯಾಯಾಲಯದ ಕಾರ್ಯವ್ಯಾಪ್ತಿ**

ಪ್ಯಾರಾಗ್ರಾಫ್ 7ರ ಪ್ರಕಾರ, ಸಂವಿಧಾನದಲ್ಲಿ ಏನೇ ಸೂಚಿಸಿದ್ದರೂ ಸಹ ಅನರ್ಹತೆ ವಿಷಯಕ್ಕೆ ಸಂಬಂಧಿಸಿ ಯಾವುದೇ ರೀತಿಯ ತೀರ್ಪುನೀಡಲು ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದು ಹೇಳಿದೆ.

ಆದರೆ ಈ ಪ್ಯಾರಾವನ್ನು ಕಿಹೊಟೊ ಹೊಲ್ಲಾನ್ ವಿ. ಝೂಚಿಲ್ಲು ಪ್ರಕರಣದಲ್ಲಿ ನ್ಯಾಯಾಲಯವು ಬೇರ್ಪಡಿಸುವ ಸಿದ್ಧಾಂತದ ಆಧಾರದ ಮೇಲೆ ಈ ಉಪಬಂಧವನ್ನು ಅಸಂವಿಧಾನಿಕವೆಂದು ಹೇಳಲಾಗಿದೆ. ಏಕೆಂದರೆ ಇದು ನಮ್ಮ ಸಂವಿಧಾನದ ಮೂಲ ರಚನಾ ಸಿದ್ಧಾಂತದ ಅತ್ಯಂತ ಪ್ರಮುಖ ಭಾಗವಾದ ನ್ಯಾಯಾಲಯದ ಮರು ಪರಿಶೀಲನಾ ಹಕ್ಕನ್ನು ಉಲ್ಲಂಘಿಸುತ್ತದೆ.

**ನಿಯಮಗಳು:**

ಪ್ಯಾರಾಗ್ರಾಫ್ 8ರ ಪ್ರಕಾರ ಸಭಾಪತಿ ಅಥವಾ ಅಧ್ಯಕ್ಷರು ಈ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದಾಗಿದೆ. ಇದರ ಮೂಲ ಉದ್ದೇಶ 10ನೇ ಅನುಸೂಚಿಯನ್ನು ಉತ್ತೇಜಿಸುವುದೇ ಹೊರತು ಅದರ ವ್ಯಾಪ್ತಿಯನ್ನು ವಿಸ್ತರಿಸುವುದು ಅಥವಾ ಬೇರೆ ಹೊಸ ಅರ್ಥವನ್ನು ಅರ್ಥೈಸುವಂತಿರಬಾರದು.

ಕಿಹೊಟೊ ಹೊಲ್ಲಾನ್ ವಿ. ಝೂಚಿಲ್ಲು ಪ್ರಕರಣದಲ್ಲಿ 10ನೇ ಅನುಸೂಚಿಯು ಸಂವಿಧಾನದ ಸಿಂಧುತ್ವವನ್ನು ಎತ್ತಿಹಿಡಿದಿದೆ. ಈ ಅನುಸೂಚಿಯ ಸತ್ಪರಿಣಾಮಕಾರಿ ಯಾದ ನಿಬಂಧನೆಗಳಿಂದ ಸಂಸದೀಯ ಪ್ರಜಾಪ್ರಭುತ್ವದ ಚೌಕಟ್ಟನ್ನು ಬಲಪಡಿಸುವುದಲ್ಲದೆ ಇದರ ಮೂಲಕ ತತ್ವನಿಷ್ಠವಲ್ಲದ ಮತ್ತು ಅನೈತಿಕ ರಾಜಕೀಯ ಪಕ್ಷಾಂತರ ವನ್ನು ತಡೆಯುವ ಉದ್ದೇಶ ಇದರದ್ದಾಗಿದೆ.

**ಪಕ್ಷಾಂತರ ನಿಷೇಧ ಕಾಯ್ದೆಯು ನಮ್ಮ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆಯೇ?**

ಚುನಾವಣೆಯಲ್ಲಿ ಆಯ್ಕೆಗೊಂಡ ಪಕ್ಷಗಳು ಬಹುಮತ ವನ್ನು ಸಾಧಿಸಲು ಸಮ್ಮಿಶ್ರ ಸರ್ಕಾರದ ರಚನೆಗಾಗಿ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಪಕ್ಷಾಂತರಗೊಳ್ಳುವ ಪ್ರಕ್ರಿಯೆಯು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಮತ್ತು ದೇಶಕ್ಕೆ ಕಂಟಕಪ್ರಾಯವಾಗಿ ಪರಿಣಮಿಸುತ್ತಿದೆ. ಪಕ್ಷಾಂತರಗೊಳ್ಳು ವಂತಹ ಪ್ರಕ್ರಿಯೆಯು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದು, ಇಂತಹ ಪರಿಸ್ಥಿತಿಯು ಪ್ರಜೆಗಳ ನಂಬಿಕೆಯನ್ನು ಘಾಸಿ ಮಾಡುವುದಲ್ಲದೆ ಸಂವಿ ಧಾನಾತ್ಮಕ ಸಿದ್ಧಾಂತಗಳಿಂದ ವಿಚಲಿತಗೊಂಡು ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಧಕ್ಕೆಯನ್ನುಂಟುಮಾಡುತ್ತದೆ. ಆದ್ದರಿಂದ ಪ್ರಜಾಪ್ರಭುತ್ವದ ವಿರುದ್ಧದ, ತತ್ವನಿಷ್ಠವಲ್ಲದ, ಅನೈತಿಕ, ಅತಿರೇಕದ ಪಕ್ಷಾಂತರವನ್ನು ಪ್ರಜಾಪ್ರಭುತ್ವದ ಉಳಿವಿಗಾಗಿ, ಪ್ರಗತಿಗಾಗಿ ಮತ್ತು ಸಮರ್ಥನೀಯವಾಗಿ ಕಾಪಾಡಲು ಪಕ್ಷಾಂತರ ನಿಷೇಧ ಕಾಯ್ದೆಯು ಅಸ್ತ್ರವಾಗಿ ಪರಿಣಮಿಸಿದೆ.

**ಪಕ್ಷಾಂತರ ನಿಷೇಧ ಕಾಯ್ದೆಯು ಸದಸ್ಯನ ಆತ್ಮ ಸಾಕ್ಷಿ ಉಲ್ಲಂಘನೆಯಾಗುತ್ತದೆ?**

ಅತಿ ಹೆಚ್ಚಿನ ಪಕ್ಷಾಂತರವು ಸ್ವಾರ್ಥ, ಅಧಿಕಾರದ ಆಸೆ, ಹಣದ ಮೋಹ, ಜನರ ತೀರ್ಪಿನ ವಿರುದ್ಧವಾಗಿ ರುತ್ತದೆ. ಒಂದು ವೇಳೆ ಸದನದ ಸದಸ್ಯನು ಪ್ರಾಮಾಣಿಕ ವಾಗಿಯು ಅನ್ಯಾಯಕ್ಕೆ ಒಳಗಾಗಿದ್ದರೆ ಅಂತಹ ಸದನದ ಸದಸ್ಯನು ರಾಜೀನಾಮೆಯನ್ನು ಕೊಟ್ಟು ಮರು ಚುನಾವಣೆಗೆ ನಿಲ್ಲಬಹುದು. ಆದರೆ ಸಂವಿಧಾನ ವಿರುದ್ಧವಾದಂತಹ ಹಾಗೂ ಪ್ರಜಾಪ್ರಭುತ್ವದ ವಿರೋಧಿಯಾದಂತಹ ಪಕ್ಷಾಂತರವನ್ನು ಮಾಡಬಾರದು.

**ರಾಜಕೀಯ ಪಕ್ಷಗಳ ಪಾತ್ರ**

ಸಂವಿಧಾನ ತತ್ವಗಳ ಸಾಕಾರತೆಯಲ್ಲಿ ರಾಜಕೀಯ ಪಕ್ಷಗಳ ಪಾಲು ದೊಡ್ಡದು, ಜನರ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಗಟ್ಟಿಗೊಳಿಸಲು ದುಡಿಯಬೇಕು ಹಾಗಾಗಿ ರಾಜಕೀಯ ಪಕ್ಷಗಳು ಬೇರೊಂದು ಪಕ್ಷದ ಸದನದ ಸದಸ್ಯನನ್ನು ಆಕರ್ಷಣೆ ಮಾಡಬಾರದು ಹಾಗೂ ತಮ್ಮ ಪಕ್ಷದ ಟಿಕೇಟನ್ನು ಕೋಟಿಗಟ್ಟಲೆ ಹಣ ಮಾಡುವ, ಅಧಿಕಾರದ ದುರಾಸೆ ಇರುವ ವ್ಯಕ್ತಿಗಳಿಗೆ ಕೊಡುವುದನ್ನು ಬಿಟ್ಟು ಸಂವಿಧಾನ ಮತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಹೊಂದಿರುವ ನಿಷ್ಠಾವಂತ ಪಕ್ಷದ ಕಾರ್ಯಕರ್ತನಿಗೆ ನೀಡಬೇಕು.

**ಪರಿಸಮಾಪ್ತಿ**

ಭಾರತವು ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿ ನಿಧಿಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ. "ಪ್ರಜಾ ಪ್ರಭುತ್ವಕ್ಕೆ ದೂರ ದೃಷ್ಟಿವುಳ್ಳಂತಹ, ಬಲವಾದ ನಡತೆಯನ್ನು ಹೊಂದಿರುವಂತಹ ಹಾಗೂ ಯಾರು ತಮ್ಮ ವ್ಯಯಕ್ತಿಕ ಹಿತಕ್ಕಾಗಿ ದೇಶದ ಹಿತರಕ್ಷಣೆಯನ್ನು ಬಲಿಕೊಡುವು ದಿಲ್ಲವೋ ಅಂತಹವರಿಂದ ಮಾತ್ರ ನಮ್ಮ ದೇಶದ ಅಭಿವೃದ್ಧಿಯ ವಿಶ್ವಾಸವನ್ನು ನಂಬಬಹುದು" ಎಂದು ಸಂವಿಧಾನದ ಚರ್ಚಾ ಸಭೆಯಲ್ಲಿ ಡಾ. ಬಾಬು ರಾಜೇಂದ್ರ ಪ್ರಸಾದರವರು ಉಲ್ಲೇಖ ಮಾಡುತ್ತಾರೆ.

ಆದರೆ ಇತ್ತೀಚಿನ ದಿನಮಾನಗಳಲ್ಲಿ ಮಾಧ್ಯಮವನ್ನು ವೀಕ್ಷಿಸಿದಾಗ, ಒಬ್ಬ ಸಾಮಾನ್ಯ ಪ್ರಜೆಯು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾನೆ. ಒಂದು ವೇಳೆ ಇದೇ ಮುಂದುವರೆದರೆ ನಮ್ಮ ಸಂವಿ ಧಾನದ ತತ್ವಗಳ ಪ್ರಾಮುಖ್ಯತೆಯು ಬುಡಮೇಲು ಮಾಡಿದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಸದನದ ಸದಸ್ಯನು ತನ್ನ ಕರ್ತವ್ಯ, ಕಾರ್ಯ, ಸವಲತ್ತು ಮತ್ತು ಪ್ರಜೆಗಳಿಗೋಸ್ಕರ ಆಯ್ಕೆಯಾಗಿರುವ ತನ್ನ ಮೇಲಿನ ಜವಾ ಬ್ದಾರಿಗಳಿಗೆ ಮೊದಲ ಆದ್ಯತೆ ನೀಡಿ ಕಾರ್ಯನಿರ್ವ ಹಿಸಬೇಕು. ಹಾಗೂ ಸದನದ ಸದಸ್ಯನು ಸಂವಿಧಾನದ ಮಹತ್ವಾಕಾಂಕ್ಷೆಯನ್ನು ಮತ್ತು ಸಂವಿಧಾನದ ಆದೇಶವನ್ನು ಯಾವ ಮುಲಾಜಿಗೂ ಬಗ್ಗದೆ ಜನಗಳ ಹಿತಕ್ಕಾಗಿ ಕಾರ್ಯಮಾಡಬೇಕು. ಇದು ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಅತ್ಯಂತ ಅವಶ್ಯಕವಾದ ಘಟಕವಾಗಿದೆ. ❖